## ಸಿತಾರ್ ಕಲಿಯುವವರಿಗೆ...

ಪ್ರಾಕ್ಟೀಸ್, ಪ್ರಾಕ್ಟೀಸ್, ಪ್ರಾಕ್ಟೀಸ್... ಪ್ರಾಮಾಣಿಕ ಪ್ರಯತ್ನ ಮಾಡಿದರೆ ಖಂಡಿತಾ ಅದು ನಿಮ್ಮ ಕೈಹಿಡಿಯುತ್ತದೆ. ಸಿತಾರ್ ನಾದ ಎಂಥ ಕಲ್ಲುಹೃದಯವನ್ನೂ ಕರಗಿಸಬಲ್ಲದು. ಸಂಗೀತ ಮಾನಸಿಕ ಒತ್ತಡ ಕಡಿಮೆ ಮಾಡುತ್ತದೆ, ಜೀವನದಲ್ಲಿ ಶಿಸ್ತು ಬೆಳೆಸುತ್ತದೆ, ಸಾತ್ವಿಕ ಮನೋಭಾವ ಬೆಳೆಯುವಂತೆ ಪ್ರೇರೇಪಿಸುತ್ತದೆ. ಸಂಗೀತ ಕಲಿತರೆ ಜೀವನದಲ್ಲಿ ಎಂದೂ ಒಂಟಿತನ ಕಾಡುವುದೇ ಇಲ್ಲ.

ಇದು ಸಂಗೀತ ಕಲಿಯುವವರಿಗೆ ಬಹುದೊಡ್ಡ ಪ್ಲಸ್‌ಪಾಯಿಂಟ್. ನಿರಂತರ ಶ್ರಮ, ಶ್ರದ್ಧೆ, ಏಕಾಗ್ರತೆ, ಸಾಧನೆ ಎಲ್ಲವನ್ನೂ ಬಯಸುವ ಸಂಗೀತ ನಿಜಕ್ಕೂ ಧ್ಯಾನಸ್ಥ ಸ್ಥಿತಿಗೆ ಒಯ್ಯುತ್ತದೆ. ಇದರಿಂದ ಸದಾ ನೆಮ್ಮದಿ ಸಿಗುತ್ತದೆ. ಹೀಗಾಗಿ ಎಳೆಯ ಮಕ್ಕಳೇ ದಿನನಿತ್ಯ ಸಿತಾರ್ ಅಭ್ಯಾಸ ಮಾಡಿ. ಸಾಧಿಸಿ ತೋರಿಸಿ....!



ನಿರಂತರ ಸಂಗೀತ ಕಛೇರಿ, ಸಂಗೀತ ಉಪನ್ಯಾಸ, ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಸಂಗೀತದ ಎಲ್ಲ ಆಯಾಮಗಳಲ್ಲೂ ಪಳಗಿದ ಈ ವಿದ್ವಾಂಸರು, ಈಚೆಗೆ ಸ್ಪಿಕ್‌ಮೆಕೆ ಬೆಂಗಳೂರಿನಲ್ಲಿ ಆಯೋಜಿಸಿದ ಅಹೋರಾತ್ರಿ ಸಂಗೀತ ಸಮಾರಂಭದಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ 'ಸುಧಾ'ದೊಂದಿಗೆ ತಮ್ಮ ಸಂಗೀತ ಪಯಣದ ಬಗ್ಗೆ ಮುಕ್ತವಾಗಿ ಮಾತನಾಡಿದರು.

- **ವಿಶ್ವದಾದ್ಯಂತ ಹಲವಾರು ಸಿತಾರ್ ಕಛೇರಿಗಳನ್ನು ನೀಡಿದ ನಿಮಗೆ ಕೇಳುಗರು ಕೊಡುವ ಅಭೂತಪೂರ್ವ ಪ್ರತಿಕ್ರಿಯೆ ನೋಡಿದಾಗ ಏನನ್ನಿಸುತ್ತದೆ?**

ಸಂಗೀತ ಕಛೇರಿ ಮುಗಿಸಿದಾಗ ಕೇಳುಗರು ನೀಡುವ ಪ್ರತಿಕ್ರಿಯೆ, ಸ್ಪಂದನ ನೋಡಿ ಹೃದಯ ತುಂಬಿಬರುತ್ತದೆ. ಪ್ರತಿಯೊಂದೂ ಕಛೇರಿಯ ಅನುಭವ ವಿಭಿನ್ನ. ಕಛೇರಿ ಕೇಳಿದ ಕೆಲವರು ಭಾವುಕತೆಯಿಂದ ಆನಂದಬಾಷ್ಪ ಸುರಿಸಿದರೆ, ಇನ್ನೂ ಕೆಲವರು ಕೆಲ ಹೊತ್ತು ಹಾಗೇ ಸ್ಟ್ಯಾಂಡಿಂಗ್ ಒವೇಷನ್‌ನಲ್ಲೇ ಇರುತ್ತಾರೆ. ಕಛೇರಿಯನ್ನು ಮೊದಲ ಬಾರಿಗೆ ಕೇಳಿದವರೂ ಆನಂದದಿಂದ ತಲೆದೂಗುವುದು ನೋಡಿದಾಗ ಸಂಗೀತ ಸೇವೆ ಸಾರ್ಥಕತೆ ಪಡೆಯುತ್ತದೆ. ಇಡೀ ವಿಶ್ವದಲ್ಲಿ ಸಂಗೀತ ಹೃದಯ–ಹೃದಯವನ್ನು ಬೆಸೆಯುತ್ತದೆ.

- **ಸಂಗೀತ ಕಛೇರಿಗಳ ಕೆಲವು ಅಮೂಲ್ಯ ಕ್ಷಣಗಳನ್ನು ನೆನಪಿಸಿಕೊಳ್ಳುವಿರಾ...**

ನನ್ನ ಸಂಗೀತ ಜೀವನದಲ್ಲಿ ಹಲವು ಸ್ಮರಣೀಯ ಕ್ಷಣಗಳಿವೆ. ಸಿಡ್ನಿಯ ಪ್ರತಿಷ್ಠಿತ ಒಪೆರಾ ಹೌಸ್‌ನ ವೇದಿಕೆಯಲ್ಲಿ ಗುರು ಪಂ. ರವಿಶಂಕರ್ ಅವರ ಜೊತೆ ಸೇರಿ ನುಡಿಸಿದ ಕಛೇರಿ ಎಂದೂ ಮರೆಯುವಂಥದ್ದಲ್ಲ. ಕೆಲ ದಿನಗಳ ಹಿಂದೆ ಅಹಮದಾಬಾದ್‌ನಲ್ಲಿ ನನ್ನ ಪತ್ನಿ ಸಸ್ಕಿಯಾ ಜೊತೆಗೂಡಿ ನೀಡಿದ ಸಿತಾರ್ ಜುಗಲ್‌ಬಂದಿ ಕಛೇರಿಗೆ ಕೇಳುಗರು ನೀಡಿದ ಪ್ರತಿಕ್ರಿಯೆ ಅದ್ಭುತ ಅನುಭವ. ಸಂಗೀತ ಕಛೇರಿ ಮುಗಿದ ಬಳಿಕ ಅನೇಕ ಕೇಳುಗರ ಕಣ್ತುಂಬಿ ಬಂದಿದ್ದು, ನಮ್ಮ ಬಳಿ ಬಂದು ಭಾವನೆಗಳನ್ನು ಹಂಚಿಕೊಂಡದ್ದು ಜೀವನದ ಸುಮಧುರ ಕ್ಷಣ ಎನಿಸಿತ್ತು. ಸಂಗೀತದಿಂದ ಧನ್ಯನಾದೆ ಎಂಬ ಭಾವ ಉಂಟಾದದ್ದೂ ನಿಜ.

- **ಬಹುಬೇಡಿಕೆಯ ಹಾಗೂ ನಿಮ್ಮಂತೆ ಖ್ಯಾತನಾಮರಾದ ಸಂಗೀತಗಾರರು ಉತ್ತಮ ಅವಕಾಶ, ವೇದಿಕೆ, ಹಣ, ಹೆಸರು ಎಲ್ಲವನ್ನೂ ಪಡೆಯಲು ಸಾಧ್ಯವಾಗಿದೆ. ಆದರೆ ಇಂದಿನ ಪೀಳಿಗೆಯ ಯುವ ಕಲಾವಿದರು ಇಂಥ ಅವಕಾಶಕ್ಕಾಗಿ ಕಾದರೂ ನಿರಾಸೆ ಎದುರಿಸುವ ಸನ್ನಿವೇಶವಿದೆ. ನಿಮ್ಮ ಪ್ರತಿಕ್ರಿಯೆ ಏನು?**

ಯಶಸ್ಸು, ಜನಪ್ರಿಯತೆ ಸುಖಾಸುಮ್ಮನೆ ಬರುವುದಿಲ್ಲ. ಒಮ್ಮೆಲೆ ಆಕಾಶಕ್ಕೆ ಏಣಿ ಇಡಲು ಸಾಧ್ಯವೇ ಇಲ್ಲ. ಯಶಸ್ಸಿಗೆ ಯಾವುದೇ ಶಾರ್ಟ್‌ಕಟ್ ಕೂಡ ಇಲ್ಲ. ಸಂಗೀತ ಸೇರಿದಂತೆ ಯಾವುದೇ ಕ್ಷೇತ್ರ ಕಠಿಣ ಪರಿಶ್ರಮ, ಶ್ರದ್ಧೆ, ಸಾಧನೆ, ಅಭ್ಯಾಸ ಎಲ್ಲವನ್ನೂ ಬಯಸುತ್ತದೆ. ನಾನು ಈ ಮಟ್ಟಕ್ಕೆ ಏರಲು ಕಠಿಣ ಪರಿಶ್ರಮ ಪಟ್ಟವನೇ. ಪ್ರತಿದಿನ 10ರಿಂದ 12 ತಾಸು ರಿಯಾಜ್‌ಗೇ ಮೀಸಲಿಡುತ್ತಿದ್ದೆ. ಒಮ್ಮೆ ಒಂದು ಮಟ್ಟಕ್ಕೆ ಏರಿದೆವು, ಗುರಿ ಮುಟ್ಟಿದೆವು ಎಂದಾದರೆ ಯಶಸ್ಸು, ಅವಕಾಶ ತಾನೇ ತಾನಾಗಿ ಬರುತ್ತದೆ, ನಾವು ಹುಡುಕಿಕೊಂಡು ಹೋಗಬೇಕಾಗಿಲ್ಲ.

- **ಗಾಯನವಿರಲಿ, ವಾದನವೇ ಆಗಿರಲಿ ಅಪ್ಪಟ ಶಾಸ್ತ್ರೀಯ ಸಂಗೀತದ ಗಾಯಕ–ವಾದಕರು ಇತ್ತೀಚೆಗೆ ಫ್ಯೂಷನ್ ಸಂಗೀತದತ್ತಲೂ ಒಲವು ತೋರಿ ಅಲ್ಲೂ ಪ್ರತಿಭೆ ಮೆರೆಯುತ್ತಿದ್ದಾರೆ. ಇದರಿಂದ ಶಾಸ್ತ್ರೀಯತೆಯ ಆಶಯಕ್ಕೆ ಧಕ್ಕೆಯಾಗುವುದಿಲ್ಲವೇ?**

ಶಾಸ್ತ್ರೀಯ ಸಂಗೀತದ ಆಳ–ಅಗಲ, ಬೇರು ಗಟ್ಟಿಯಾಗಿರುವುದು ಬಹಳ ಮುಖ್ಯ. ತಾಯಿಬೇರು ಭದ್ರವಾಗಿ ತಳವೂರಿದರೆ ಮುಂದೆ ಯಾವುದೇ ಪ್ರಕಾರಗಳತ್ತ ಮುಖಮಾಡಿದರೂ ಮೂಲ ಆಶಯಕ್ಕೆ ಧಕ್ಕೆಯಾಗುವುದಿಲ್ಲ. ಸಂಗೀತದ ಮೂಲ ಸ್ವರೂಪವನ್ನು ಮನದಲ್ಲಿಟ್ಟುಕೊಂಡು ಯಾವ ಪ್ರಯೋಗವನ್ನೂ ಮಾಡಬಹುದು. ಸಂಗೀತದ ಇತರ ಪ್ರಕಾರಗಳನ್ನು ಬಹಳ ಸುಲಭವಾಗಿ ರೂಢಿಸಿಕೊಳ್ಳಲೂ ಬಹುದು. ಸಂಗೀತ ಯಾವುದೇ ಆಗಿದ್ದರೂ ಕೇಳುಗರಿಗೆ ಹಿತವೆನಿಸುವ ಮಧುರಾತಿಮಧುರ ಭಾವನೆಗಳನ್ನು ಸೃಷ್ಟಿಸುವ ಸಂಗೀತ ಎಲ್ಲರನ್ನೂ ಆಕರ್ಷಿಸುವುದು ಮಾತ್ರ ಖಚಿತ.

- **ದೇಶ ವಿದೇಶಗಳಲ್ಲಿ ಎಲ್ಲೇ ಕಛೇರಿ ನೀಡಲಿ, ಸಂಗೀತಗಾರರಿಗೆ ಬೆಂಗಳೂರಿನಲ್ಲಿ ಕಛೇರಿ ನೀಡಿದಾಗ ಸಿಗುವ ಸಂತೃಪ್ತಿಯ ಪರಿಯೇ ಬೇರೆಯದು. ಅನೇಕ ಖ್ಯಾತ ಗಾಯಕ–ವಾದಕರು ಈ ಮಾತನ್ನು ಅನುಮೋದಿಸುತ್ತಾರೆ. ನಿಮ್ಮ ಅನಿಸಿಕೆ ಏನು?**

ನಾನು ಬೆಂಗಳೂರಿನವನೇ. ಇಲ್ಲಿನ ಬಾಲ್ಯದ ಸವಿನೆನಪುಗಳು ಅತ್ಯಂತ ಸುಮಧುರ. ಪ್ರಪಂಚದ ಯಾವುದೇ ದೇಶಕ್ಕೆ ಕಛೇರಿಗೆ ಹೋಗಿರಲಿ, ದೇಶದ ನಾನಾ ಭಾಗಗಳಲ್ಲಿ ಪ್ರಯಾಣಿಸಿರಲಿ, ಬೆಂಗಳೂರಿಗೆ ಬಂದಾಗ ಮನಸ್ಸಿಗಾಗುವ ಆನಂದ ಅಷ್ಟಿಷ್ಟಲ್ಲ. ಇಲ್ಲಿ ನಡೆಯುವ ಕಛೇರಿಗಳು, ಒಳ್ಳೊಳ್ಳೆಯ ವೇದಿಕೆಗಳು, ಸಹೃದಯ ಕೇಳುಗರು, ಆತ್ಮೀಯ ಸ್ನೇಹಿತರು ಎಲ್ಲವೂ ಮನಸ್ಸಿಗೆ ಆನಂದದಾಯಕವೇ. ನಮ್ಮ ತಂದೆ ಇಲ್ಲಿ ಸಿತಾರ್ ಹಾಗೂ ಉತ್ತರಾದಿ ಸಂಗೀತವನ್ನು ಬೆಳೆಸಲು, ಜನಪ್ರಿಯಗೊಳಿಸಲು ಸಾಕಷ್ಟು ಶ್ರಮಪಟ್ಟವರು. ಒಂದು ಕಛೇರಿ ಆಯೋಜಿಸಲು ತಂದೆ ಮನೆಮನೆಗೆ ಹೋಗಿ 25 ಪೈಸೆ, 50 ಪೈಸೆ ಸಂಗ್ರಹಿಸುತ್ತಿದ್ದುದು ಇನ್ನೂ ನೆನಪಿದೆ. ಆ ಪರಿಶ್ರಮ ಇಂದು ನನಗೆ ವರವಾಗಿದ್ದಲ್ಲದೆ, ಸಂಗೀತ ಹೆಮ್ಮರವಾಗಿ ಬೆಳೆಯುವಂತಾಗಿದೆ.

- **ಸಿತಾರ್ ಮಾಂತ್ರಿಕ ಪಂ. ರವಿಶಂಕರ್ ಅವರ ಅಚ್ಚುಮೆಚ್ಚಿನ ಶಿಷ್ಯರಾದ ನೀವು ಅಂತಹ ಮಹಾನ್ ಕಲಾವಿದರ ಜೊತೆಗೆ ಒಡನಾಡಿದ ಕೆಲ ಕ್ಷಣಗಳನ್ನು ಮೆಲುಕು ಹಾಕಿ.**

ಪಂ. ರವಿಶಂಕರ್ ಸಿತಾರ್ ಪ್ರಪಂಚದ ಮೇರುಪರ್ವತ. ಚಿಕ್ಕಂದಿನಿಂದಲೂ ಅವರೊಂದಿಗೆ ಒಡನಾಡುವ ಅವಕಾಶ ನನಗೆ ಒದಗಿ ಬಂದದ್ದು ಸೌಭಾಗ್ಯವೆಂದೇ ಹೇಳಬೇಕು. ಅವರಿಂದ ಕಲಿತ ಸಂಗೀತ, ಶಿಸ್ತು, ಜೀವನಪ್ರೀತಿ ಎಲ್ಲವೂ ದಾಖಲೆಯಾಗಬೇಕಾದವೇ. ಎಲ್ಲವನ್ನೂ ಮೆಲುಕು ಹಾಕಿದರೆ ಪುಸ್ತಕಗಳನ್ನೇ ಬರೆಯಬಹುದು. ಒಬ್ಬ ಪರಿಪೂರ್ಣ ಕಲಾಕಾರ, ಶ್ರೇಷ್ಠ ಕಲಾವಿದ ಪಂ. ರವಿಶಂಕರ್ ಅಂಥವರು ಪ್ರಪಂಚದಲ್ಲೇ ವಿರಳಾತಿವಿರಳ. ಅವರೊಂದಿಗೆ ಕಳೆದ ಎಲ್ಲ ಕ್ಷಣಗಳೂ ನನಗೆ ದಾರಿದೀಪ. ■